ಶಶಿಕುಮಾರ್ ಮೈಸೂರಿನವರು. ನವದೆಹಲಿಯಲ್ಲಿರುವ 'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಇಂಡಿಯಾ'ದಲ್ಲಿ ಕಮಿಶನಿಂಗ್ ಎಡಿಟರ್ ಆಗಿ ಅನುವಾದ ಯೋಜನೆಗಳ ಮೇಲ್ವಿಚಾರಣೆ ನೋಡಿಕೊಂಡವರು. ಸದ್ಯ ಕೆನಡಾದ ಆಲ್ಬರ್ಟಾ ವಿಶ್ವವಿದ್ಯಾಲಯದಲ್ಲಿ 'ಕರ್ನಾಟಕ ದಲಿತ ಸಾಹಿತ್ಯ ಹಾಗೂ ಚಳವಳಿಯ ಇತಿಹಾಸ' ಕುರಿತು ಸಂಶೋಧನೆಯಲ್ಲಿ ನಿರತರು. ಸಾಹಿತ್ಯ ಹಾಗೂ ಸಂಸ್ಕೃತಿ ಇತಿಹಾಸದಲ್ಲಿ ತೊಡಗಿಸಿಕೊಂಡಿರುವ ಅವರ ಮುಂಬರಲಿರುವ ಪುಸ್ತಕ 'ಕ್ರಿಟಿಕಲ್ ಡಿಸ್ಕೋರ್ಸ್ ಇನ್ ಕನ್ನಡ.'

ಜಗಳಗಳು, ಎಲ್ಲವನ್ನೂ ಗಮನಿಸುತ್ತಿದ್ದೆ. ಅದೇ ವೇಳೆಗೆ ಕನ್ನಡಕ್ಕೆ ಕ್ಲಾಸಿಕಲ್ ಸ್ಥಾನಮಾನ ಬೇಕೆಂದು ಹೋರಾಡಲು ಬೇಕಾದ ದಾಖಲೆಗಳ ಕುರಿತು ರಾಮಸ್ವಾಮಿಯವರಿಗೆ ಮನವಿ ಪತ್ರಗಳು ಕೂಡ ಬರಲಾರಂಭಿಸಿದವು. 'ಸಿಐಐಎಲ್'ನ ದಕ್ಷಿಣ ಪ್ರಾದೇಶಿಕ ಭಾಷಾ ಕೇಂದ್ರ ಅಥವಾ ಎಸ್‌ಆರ್‌ಎಲ್‌ಸಿಯಲ್ಲಿ ಉಪನ್ಯಾಸಕರಾಗಿದ್ದ ಲಿಂಗದೇವರು ಹಳೆಮನೆಯವರು ಕ್ಲಾಸಿಕಲ್ ಸ್ಥಾನಮಾನ ಬೇಕೆಂಬ ಹೋರಾಟದಲ್ಲಿ ತೊಡಗಿಕೊಂಡವರು. ಇವೆಲ್ಲ ಬೆಳವಣಿಗೆಗಳನ್ನು ನಾನು ಪ್ರತಿದಿನ ಗಮನಿಸುತ್ತಿದ್ದರೂ, ಅಧಿಕೃತವಾಗಿ ನೇಮಕಗೊಂಡಿದ್ದು ಸಿಐಐಎಲ್, ಸಾಹಿತ್ಯ ಅಕಾಡೆಮಿ ಹಾಗೂ ನ್ಯಾಷನಲ್ ಬುಕ್ ಟ್ರಸ್ಟ್ ಜಂಟಿಯಾಗಿ ಆರಂಭಿಸಿದ್ದ 'ಕಥಾಭಾರತಿ' ಯೋಜನೆಗಾದ್ದರಿಂದ ನನ್ನ ಅನುಭವ ಕಥನವನ್ನು ಅಲ್ಲಿಂದಲೇ ಆರಂಭಿಸುವೆ.

## ಕಥಾಭಾರತಿ ಹಾಗೂ ಕನ್ನಡ ಸಾಹಿತ್ಯಾನುವಾದ

ಭಾರತೀಯ ಭಾಷೆಗಳ ನೂರು ಆಧುನಿಕ ಕ್ಲಾಸಿಕ್‌ಗಳನ್ನು ಇಂಗ್ಲಿಷ್ ಸೇರಿದಂತೆ, ಪ್ರಮುಖ ಯುರೋಪಿಯನ್ ಭಾಷೆಗಳಿಗೆ ಅನುವಾದಿಸುವ ಯೋಜನೆಯ ಉದ್ದೇಶ ಹೊಂದಿದ ಯೋಜನೆ 'ಕಥಾಭಾರತಿ'. ಆ ಯೋಜನೆಯಲ್ಲಿ ಆಯ್ಕೆಗೊಂಡಿದ್ದ ಕನ್ನಡದ ಐದು ಕೃತಿಗಳು, ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ', ತ್ರಿವೇಣಿಯವರ 'ಬೆಕ್ಕಿನ ಕಣ್ಣು', ವೈದೇಹಿಯವರ ಆಯ್ದ ಸಣ್ಣಕತೆಗಳು, ಹಾಗೂ ದೇವನೂರ ಮಹಾದೇವರ 'ಕುಸುಮಬಾಲೆ'. ಆಯ್ಕೆ ಮಾಡುವುದಕ್ಕೆ ತಜ್ಞರ ಒಂದು ಮಂಡಳಿ ಕೂಡ ಇದ್ದುದರಿಂದ ಐದೂ ಕೃತಿಗಳು 'ಕ್ಲಾಸಿಕ್'ಗಳೇ. ಅನುವಾದದ ಹಕ್ಕಿಗಾಗಿ ಹಕ್ಕುದಾರರಿಗೆ ಎರಡು ಕಂತುಗಳಲ್ಲಿ ತಲಾ ಎಪ್ಪತ್ತೈದು ಸಾವಿರ ನೀಡುವುದಾಗಿ ಘೋಷಣೆ ಕೂಡ ಮಾಡಲಾಗಿತ್ತು. ಅಂದಿನ ಕಾಲಕ್ಕೆ, ಅದೂ ಸರ್ಕಾರಿ ಯೋಜನೆಯೊಂದರಲ್ಲಿ ಅನುವಾದದ ಹಕ್ಕಿಗೆಂದು ನೀಡುವ ಬಹುದೊಡ್ಡ ಮೊತ್ತವದಾಗಿತ್ತು. ಪುಸ್ತಕ ಪ್ರಕಟಣೆಯೊಂದರಲ್ಲಿ, ಅದರಲ್ಲೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇಂಗ್ಲಿಷ್‌ನಲ್ಲಿ ಪುಸ್ತಕ ಪ್ರಕಟಿಸುವಾಗ ಕಾಪಿರೈಟ್ ವ್ಯಾಪ್ತಿಯಷ್ಟೇ ಮುಖ್ಯ ಅದಕ್ಕೆ ನೀಡುವ ಮೊತ್ತ.

'ಮಲೆಗಳಲ್ಲಿ ಮದುಮಗಳು' ಇಂಗ್ಲಿಷ್ ಅನುವಾದದ ಯತ್ನವನ್ನು 2004ಕ್ಕೂ ಮುಂಚೆ ಯಾರು ಮಾಡಿದ್ದರೋ ತಿಳಿಯದು.

ಅರವತ್ತರ ದಶಕದಲ್ಲಿ ಒಂದರ ನಂತರ ಒಂದು ಪ್ರಕಟವಾದ ಅನಂತಮೂರ್ತಿಯವರ 'ಸಂಸ್ಕಾರ', ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಎರಡೂ ಭಿನ್ನ ಮನೋಧರ್ಮದ ಕಾದಂಬರಿಗಳಾದರೂ ಕ್ಲಾಸಿಕ್ ಪಟ್ಟವನ್ನು ಪಡೆದುಕೊಂಡವು. ಅನಂತಮೂರ್ತಿಯವರ ಕಿರು ಕಾದಂಬರಿ, ಶಿಕಾಗೋ ವಿಶ್ವವಿದ್ಯಾಲಯದ ಪ್ರೊಫೆಸರ್ ಎ.ಕೆ. ರಾಮಾನುಜನ್ ಅವರಿಂದ ಇಂಗ್ಲಿಷ್‌ಗೆ ಅನುವಾದಗೊಂಡು, ವಿ.ಎಸ್. ನೈಪಾಲ್‌ರಂತಹ ವಿಶ್ವಪ್ರಸಿದ್ಧರ ಪ್ರಶಂಸೆ, ಮುಂತಾದವುಗಳಿಂದಾಗಿ ಜಾಗತಿಕ ಸಾಹಿತ್ಯದಲ್ಲೂ ಕ್ಲಾಸಿಕ್ ಸ್ಥಾನವನ್ನು ಪಡೆದುಕೊಂಡಿತು. ಆದರೆ, ಬೃಹತ್ ಕಾದಂಬರಿಯಾದ 'ಮಲೆಗಳಲ್ಲಿ ಮದುಮಗಳು'?

ಅನಂತಮೂರ್ತಿಯವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ವಿಮರ್ಶೆ ಮಾಡುತ್ತ, "ಪುಟ್ಟಪ್ಪನವರ ಕಾದಂಬರಿಯಲ್ಲಿ ಕೇಂದ್ರವಿಲ್ಲ" ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಬಹುದು.